ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE : 16/02/2020

ಪ್ರತಿಪಕ್ಷ ಜೆಡಿಎಸ್, ಕಾಂಗ್ರೆಸ್ ನಡುವೆ ಹೊಂದಾಣಿಕೆ ಕೊರತೆ | ಆಡಳಿತ ಪಕ್ಷ ಬಿಜೆಪಿಗೆ ನಿರಾ...

# ಸವಾಲು ಗೆದ್ದು ಸಚಿವರಾಗಿಯೇ ಸದನ ಪ್ರ...

**ವಿಕ ಸುದ್ದಿಲೋಕ** ಬೆಂಗಳೂರು

ಸಚಿವರಾಗುವ ಶಪಥದೊಂದಿಗೆ ಮೈತ್ರಿ ಸರಕಾರ ಉರುಳಿಸಿದವರೆಲ್ಲ ಸಚಿವರಾಗಿಯೇ ಸೋಮವಾರ ಸದನಕ್ಕೆ ಹೆಜ್ಜೆ ಇಡಲಿದ್ದಾರೆ.

ಮೈತ್ರಿ ಸರಕಾರ ಪತನಗೊಳಿಸಲು ಸ್ಥಾನಕ್ಕೆ ರಾಜೀನಾಮೆ ನೀಡಿದ್ದ 17 ಶಾಸಕರ ಪೈಕಿ 10 ಮಂದಿ ಸೋಮವಾರದಿಂದ ಆರಂಭಗೊಳ್ಳುವ ವಿಧಾನಮಂಡಲ ಅಧಿವೇಶನಕ್ಕೆ 8 ತಿಂಗಳ ಬಳಿಕ ಪ್ರವೇಶ ಮಾಡಲಿದ್ದಾರೆ. ಜೆಡಿಎಸ್ ಹಾಗೂ ಕಾಂಗ್ರೆಸ್ ನಾಯಕರು ಹಾಕಿದ್ದ ಸವಾಲು ಗೆದ್ದಿದ್ದೇವೆ ಎಂದು ವಿಧಾನಸಭೆಯಲ್ಲಿ ಸಾಮರ್ಥ್ಯ ಪ್ರದರ್ಶನ ಮಾಡುವುದಕ್ಕೆ ಸಿದ್ಧತೆ ನಡೆಸಿದ್ದಾರೆ.

ಕಳೆದ ಜುಲೈ 1ರಿಂದ 10ರ ಅವಧಿಯಲ್ಲಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ 17 ಶಾಸಕರು ಅನರ್ಹತೆ ಶಿಕ್ಷೆ ಸೇರಿದಂತೆ ಅನೇಕ ಸವಾಲು ಎದುರಿಸಿ ಅಂತಿಮವಾಗಿ ಜನತಾ ನ್ಯಾಯಾಲಯದಲ್ಲಿ 11 ಮಂದಿ ತೇರ್ಗಡೆಯಾಗಿದ್ದಾರೆ. ರಾಜೀನಾಮೆ ಕೊಟ್ಟವರ ಪೈಕಿ ಎಚ್.ವಿಶ್ವನಾಥ್ ಹಾಗೂ ಎಂ.ಟಿ.ಬಿ.ನಾಗರಾಜ್ ಸೋಲು ಕಂಡಿದ್ದಾರೆ. ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ಮುನಿರತ್ನ ನಾಯ್ಡು ಹಾಗೂ ಮಸ್ಕಿ ಕ್ಷೇತ್ರದ ಪ್ರತಾಪ್ ಗೌಡ ಪಾಟೀಲ್ ವಿರುದ್ಧದ ಚುನಾವಣಾ ತಕರಾರು ಅರ್ಜಿ ಇನ್ನೂ ಇತ್ಯರ್ಥಗೊಳ್ಳಬೇಕಿರುವುದರಿಂದ ಅವರ ರಾಜಕೀಯ ಭವಿಷ್ಯ ಅತಂತ್ರವಾಗಿದೆ. ಚುನಾವಣೆಗೆ ಸ್ಪರ್ಧಿಸದಿದ್ದರೂ 'ತ್ಯಾಗಮಯಿ' ಆರ್.ಶಂಕರ್‌ಗೆ ಸಿಎಂ ಯಡಿಯೂರಪ್ಪ ಈಗಾಗಲೇ ಸಚಿವ ಸ್ಥಾನದ ಭರವಸೆ ನೀಡಿದ್ದಾರೆ. ಆದರೆ ಇದೆಲ್ಲದರ ಮಧ್ಯೆ ಮಾಜಿ ಸಚಿವ ಆರ್. ರೋಷನ್ ಬೇಗ್ ರಾಜಕೀಯ ರಂಗದಿಂದ ತೆರೆಮರೆಗೆ ಸರಿದಿದ್ದಾರೆ.

ನಿಮ್ಮ ರಾಜಕೀಯ ಭವಿಷ್ಯ ಮುಗಿದು ಹೋಯಿತು ಎಂದು ವ್ಯಂಗ್ಯವಾಡಿದ್ದ ಕಾಂಗ್ರೆಸ್ ಹಾಗೂ ಜೆಡಿಎಸ್ ನಾಯಕರಿಗೆ ಸೆಡ್ಡು ಹೊಡೆಯಲು 'ಮಿತ್ರ ಮಂಡಳಿ'ಯ ಸಚಿವರು ಸಿದ್ಧತೆ ನಡೆಸಿದ್ದಾರೆ. ಈಗಾಗಲೇ ಸಂಪುಟ ಸೇರಿರುವ ಎಚ್.ನಾಗೇಶ್ ಸೇರಿದಂತೆ ಎಲ್ಲರೂ ಒಗ್ಗಟ್ಟು ಪ್ರದರ್ಶನ ಮಾಡಲು ನಿರ್ಧರಿಸಿದ್ದಾರೆ. ರಾಜ್ಯಪಾಲರ ಭಾಷಣದ ಬಳಿಕ ಆರಂಭವಾಗುವ ಕಲಾಪ ಸಂದರ್ಭದಲ್ಲಿ ಗಟ್ಟಿತನ ಪ್ರದರ್ಶನ ಮಾಡಲು 'ಮಿತ್ರಮಂಡಳಿ' ನಿರ್ಧರಿಸಿದೆ.

**ಈಗ ಸಚಿವರಾದವರು**
- ಎಸ್.ಟಿ.ಸೋಮಶೇಖರ್
- ರಮೇಶ್ ಜಾರಕಿಹೊಳಿ
- ಆನಂದ್ ಸಿಂಗ್
- ಡಾ.ಕೆ.ಸುಧಾಕರ್
- ಬೈರತಿ ಬಸವರಾಜ್
- ಕೆ.ಗೋಪಾಲಯ್ಯ
- ಶಿವರಾಂ ಹೆಬ್ಬಾರ್
- ನಾರಾಯಣಗೌಡ
- ಶ್ರೀಮಂತ್ ಪಾಟೀಲ್
- ಬಿ.ಸಿ.ಪಾಟೀಲ್

**ಈಗಾಗಲೇ ಸಚಿವರಾದವರು**
- ಎಚ್.ನಾಗೇಶ್

**ಗೆದ್ದು ಅವಕಾಶ ವಂಚಿತ**
- ಮಹೇಶ್ ಕುಮಠಳ್ಳಿ

**ಸೋತವರು**
- ಎಂ.ಟಿ.ಬಿ.ನಾಗರಾಜ್
- ಎಚ್.ವಿಶ್ವನಾಥ್

**ಇನ್ನೂ ಅತಂತ್ರ**
- ಮುನಿರತ್ನ ನಾಯ್ಡು, ಪ್ರತಾಪ್ ಗೌಡ ಪಾಟೀಲ್, ಆರ್.ಶಂಕರ್

**ತೆರೆಮರೆಗೆ ಸರಿದವರು**
- ಆರ್.ರೋಷನ್ ಬೇಗ್



## ಸರಕಾರದ ವಿರುದ್ಧ ಸಮರಕ್ಕೆ ಪ್ರತಿಪಕ್ಷ ಸ...

ಫೆಬ್ರವರಿ 17ರಿಂದ ಮಾರ್ಚ್ 31ರ ವರೆಗೆ ನಡೆಯುವ ರಾಜ್ಯ ವಿಧಾನ ಮಂಡಲ ಅಧಿವೇಶನದಲ್ಲಿ ಸರಕಾರ ವನ್ನು ಇಕ್ಕಟ್ಟಿಗೆ ಸಿಲುಕಿಸಲು ಪ್ರತಿಪಕ್ಷಗಳು ಸಿದ್ಧತೆ ನಡೆಸಿವೆ.

ನೆರೆ ಹಾಗೂ ಬರ ಪರಿಹಾರ ಕಾರ್ಯದಲ್ಲಿ ವೈಫಲ್ಯ, ಹದಗೆಟ್ಟ ಆರ್ಥಿಕ ಪರಿಸ್ಥಿತಿ, ಅರಣ್ಯ ಕಾಯಿದೆ ಪ್ರಕಾರ ತನಿಖೆ ಎದುರಿಸುತ್ತಿರುವ ಆನಂದ್‌ಸಿಂಗ್‌ಗೆ ಅರಣ್ಯ ಇಲಾಖೆ ಸಚಿವ ಸ್ಥಾನ ನೀಡಿರುವುದು, ಸಿಎಎ ವಿರೋಧಿ ಹೋರಾಟದಲ್ಲಿ ದಾಖಲಾದ ಪ್ರಕರಣಗಳನ್ನು ಮುಂದಿಟ್ಟುಕೊಂಡು ಹೋರಾಟ ನಡೆಸಲು ಕಾಂಗ್ರೆಸ್ ಸಿದ್ಧತೆ ನಡೆಸಿದೆ.

ಇನ್ನೊಂದೆಡೆ ಮಂಗಳೂರು ಗೋಲಿಬಾರ್ ಪ್ರಕರಣ ಸಂಬಂಧ ಸದನದಲ್ಲಿ ಚರ್ಚೆ ನಡೆಸುತ್ತೇನೆ ಎಂದು ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಈಗಾಗಲೇ ಘೋಷಿಸಿದ್ದಾರೆ. ಜತೆಗೆ ಹಿಂದಿನ ಸರಕಾರದ ಕಾಮಗಾರಿಗಳಿಗೆ ತಡೆ ನೀಡಿರುವ ಬಗ್ಗೆ ಹೈಕೋರ್ಟ್ ವ್ಯಕ್ತಪಡಿಸಿದ ಆಕ್ಷೇಪಗಳ ಬಗ್ಗೆಯೂ ಪ್ರಸ್ತಾಪವಾಗುವ ಸಾಧ್ಯತೆ ಇದೆ. ಒಟ್ಟಿನಲ್ಲಿ ಈ ಬಾರಿಯ ಕಲಾಪ ಬಿಜೆಪಿ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಎಲ್ಲ ಸಾಧ್ಯತೆ ಇದೆ. ಆದರೆ ಕಾಂಗ್ರೆಸ್ – ಜೆಡಿಎಸ್ ಪರಸ್ಪರ ವಿರುದ್ಧ ದಿಕ್ಕು ನೋಡುತ್ತಿರುವುದು ಸಿಎಂ ಯಡಿಯೂರಪ್ಪನವರಲ್ಲಿ ತುಸು ನಿರಾಳತೆ ಮೂಡಿಸಿದೆ.

### ರಾಜೀನಾಮೆ ... ಸಿದ್ದರಾಮಯ್ಯ ...

ಪ್ರತಿಪಕ್ಷ ಹಾಗೂ ಶಾಸಕಾಂಗ ಪಕ್ಷದ ನಾಯಕ ಸ್ಥಾನಕ್ಕೆ ನೀಡಿದ ರಾಜೀನಾಮೆ ವಿಚಾರವನ್ನು ಕಾಂಗ್ರೆಸ್ ಹೈಕಮಾಂಡ್ ಇನ್ನೂ ಇತ್ಯರ್ಥಗೊಳಿಸದೇ ಇರುವ ಹಿನ್ನೆಲೆಯಲ್ಲಿ ಈ ಬಾರಿಯ ಕಲಾಪದಲ್ಲಿ ಸಿದ್ದರಾಮಯ್ಯನವರೇ ಕಾಂಗ್ರೆಸ್ ರಥದ ಸಾರಥಿಯಾಗಲಿದ್ದಾರೆ. ಉಪಚುನಾವಣೆ ಸೋಲಿನ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಕೆಪಿಸಿಸಿ ಅಧ್ಯಕ್ಷರ ಆಯ್ಕೆ ಜತೆಗೆ ಪ್ರತಿಪಕ್ಷ ನಾಯಕ ಸ್ಥಾನದ ವಿಚಾರವನ್ನೂ ಹೈಕಮಾಂಡ್ ಇತ್ಯರ್ಥಗೊಳಿಸಲಿದೆ. ಕಲಾಪ ಆರಂಭಕ್ಕೆ ಮುನ್ನ ಈ ವಿಚಾರ ಬಗೆಹರಿಯುವ ಸಾಧ್ಯತೆ ಕಡಿಮೆ ಇದೆ.